ಶ್ರೀ ಹೆಚ್.ಡಿ. ದೇವೇಗೌಡ.—ನಾನು ಆ ಜಾಗದಲ್ಲಿ (ವಿರೋಧ ಪಕ್ಷದಲ್ಲಿ) ಕುಳಿತು ಕಾವೇರಿ ನದಿ ನೀರಿನ ಬಳಕೆ ಬಗ್ಗೆ ತಂದ ಖಾಸಗಿ ನಿರ್ಣಯವನ್ನು ಇಡೀ ಸದನ ಸರ್ವಾನುಮತದಿಂದ ಒಪ್ಪಿತು.

ಶ್ರೀ ಬಿ. ಬಸವಲಿಂಗಪ್ಪ.—ನಾವೂ ಒಪ್ಪಿದ್ದೇವೆ.

ಶ್ರೀ ಹೆಚ್.ಡಿ. ದೇವೇಗೌಡ.—ಈ ವಿಚಾರ ಪತ್ರಿಕೆಯಲ್ಲಿ ಬಂದಿರುವುದರಿಂದ ಹೊರಗೆ ಜನರಿಗೆ ಅಪಾರ್ಥ ಕಲ್ಪನೆಯಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಏನೂ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ನಿಮಗೆ ಪ್ರಚಾರ ಸಿಗುವುದಾದರೆ ಹೋಗಲಿ. ಇಷ್ಟೆಲ್ಲಾ ಪಕೇಲಿ ತೆಗೆದುಕೊಂಡ ನೀವು ನಿಮಗೆ ಪ್ರಚಾರ ಸಿಗುತ್ತದೆಂದು ತಿಳಿದುಕೊಳ್ಳಬೇಡಿ. ಈ ಪತ್ರಿಕೆಯವರು ನನಗೆ ಗೊತ್ತಿದೆ. ನಿಮಗೇನೂ ಪ್ರಚಾರ ಸಿಗುವುದಿಲ್ಲ. ಏತಕ್ಕೆ ಯೋಚನೆ ಮಾಡುತ್ತೀರಿ? ನಿಮ್ಮ ಕಾಲದಲ್ಲಿ ಇದು ಆಗಬಾರದು ಎಂದು ನೋಡಿಕೊಳ್ಳಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ದೇವೇಗೌಡರು ಏನು ಹೇಳಿದರು, ಕಾವೇರಿ ನೀರಿನ ಬಗ್ಗೆ ರೆಸಲ್ಯೂಷನ್ ತಂದಿದ್ದೆ ಎಂದು ಹೇಳಿದರು. ನಾವೆಲ್ಲಾ ಅದನ್ನು ಒಪ್ಪಿದ್ದೆವು. ನಾವು ಈಗ ಪುನಃ ತರುತ್ತೇವೆ. ನೀವು ಜನತಾ ಪಕ್ಷದವರು ಅದೇ ದೊಡ್ಡ ಮನಸ್ಸಿನಿಂದ ಒಪ್ಪಿ ಎಂದು ಹೇಳುತ್ತೇನೆ.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಮ್ಮ ೩೫೪ನೇ ನೋಟೀಸನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದೇನೆ. ಮಾನ್ಯ ಬಸವರಾಜ್ ಅವರು ೩೫೪ರ ವಿಷಯವನ್ನು ಪ್ರಸ್ತಾಪ ಮಾಡಬಹುದು.

(೧.) ಕೊಳಲಗಿರಿ ಪೆಡ್ರೂರು-ದೊಂದೇರಂಗಡಿ ರಸ್ತೆ ಮತ್ತು ಕೊಕ್ಕರಣೆ-ಸಂತೆಕಟ್ಟೆ ರಸ್ತೆಗಳಿಗೆ ಟಾರ್ ಹಾಕಿಸುವುದು

ಶ್ರೀ ಬಸವರಾಜ (ಬ್ರಹ್ಮಾವರ).—ಕಳೆದ ಅಧಿವೇಶನದಲ್ಲಿ ನನ್ನ ಕ್ಷೇತ್ರದ ಎರಡು ಮುಖ್ಯ ರಸ್ತೆಗಳಾದ ಕೊಳಲಗಿರಿ ಪೆಡ್ರೂರು-ದೊಂದೇರಂಗಡಿ ರಸ್ತೆ ಮತ್ತು ಕೊಕ್ಕರಣೆ- ಸಂತೆಕಟ್ಟೆ ರಸ್ತೆಗಳ ಉಳಿದ ಭಾಗಕ್ಕೆ ಟಾರು ಹಾಕಿಸುವ ಬಗ್ಗೆ ಮಾನ್ಯ ಸಚಿವರು ಸದನದಲ್ಲಿ ಆಶ್ವಾಸನೆ ನೀಡಿದ್ದು, ಬಜೆಟ್ಟಿನಲ್ಲಿ ಹಣ ಮಂಜೂರು ಮಾಡಲಾಗಿದೆ ಎಂದು ತಿಳಿದ್ದಾಗ್ಯೂ ಈವರೆಗೆ ಕೆಲಸ ಆರಂಭಿಸಿರುವುದಿಲ್ಲ ವಾದ್ದರಿಂದ ಈ ಕೆಲಸಗಳನ್ನು ಕೂಡಲೇ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರು ಎತ್ತಿರತಕ್ಕ ವಿಷಯದ ಬಗ್ಗೆ ಸಂಪೂರ್ಣ ಪೂರ್ಣ ಮಾಹಿತಿ ಇಲ್ಲ. ಸಂಬಂಧಪಟ್ಟ ಎಲ್ಲಾ ಮಾಹಿತಿ ತರಿಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

(೨) ಶಿಕಾರಿಪುರ ಪುರಸಭೆಯವರು ವಿಧಿಸಿದ ಸುಂಕಕ್ಕಿಂತ ಹೆಚ್ಚಿನ ಸುಂಕವನ್ನು ವಸೂಲು ಮಾಡುತ್ತಿರುವುದು

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ಪುರಸಭೆಯವರು ೧೯೮೫-೮೬ನೇ ಸಾಲಿಗೆ ಶಿಕಾರಿಪುರ ಸಂತೆಯಲ್ಲಿ 'ಸುಂಕ'ವನ್ನು ವಸೂಲು ಮಾಡುವ ಬಗ್ಗೆ ಹರಾಜ್ ಮೂಲಕ ಒಬ್ಬ ಕಂಟ್ರಾಕ್ಟರ್‌ದಾರರಿಗೆ ವಸೂಲಿ ಮಾಡುವ ವ್ಯವಸ್ಥೆ ಮಾಡಿದ್ದು ಕಳೆದ ಎರಡು ಮೂರು ತಿಂಗಳಿಂದ ಪುರಸಭೆಯವರು ನಿಗದಿ ಮಾಡಿರುವುದಕ್ಕಿಂತ ಹೆಚ್ಚಿನ ಸುಂಕ ವಸೂಲು ಮಾಡುತ್ತಿದ್ದು ಅದನ್ನು ಪ್ರತಿಭಟಿಸಿದ ರೈತರಿಗೆ ಕಂಟ್ರಾಕ್ಟ್‌ದಾರರ ಕಡೆಯವರು ಕೈಮಾಡಿ ಪೋಲೀಸ್ ಕಂಪ್ಲೇಂಟ್ ಸಹ ಹೋಗಿರುತ್ತದೆ. ಅದಲ್ಲದೆ ಕಂಟ್ರಾಕ್ಟ್ ಪಡೆದ ದಿವಸದಿಂದ ಈವರೆಗೆ ಕಾನೂನಿನಂತೆ ಅಗತ್ಯವಾದ ಅಗ್ರಿಮೆಂಟ್ ಸಹ ಮಾಡಿಕೊಡದೆ ೩-೪ ತಿಂಗಳ ಕಂತಿನ ಹಣವನ್ನು ಪಾವತಿ ಮಾಡದಿದ್ದರೂ ಅವರ ಮೇಲೆ ಕಾನೂನಿನಂತೆ ಕ್ರಮ ಕೈಗೊಂಡಿಲ್ಲದೆ ಸರಕಾರದ ಬೊಕ್ಕಸಕ್ಕೆ ಧಕ್ಕೆ ಆಗಿದೆ. ಈ ಹಿಂದೆ ಸಹ ಇದೇರೀತಿ ಪ್ರಕರಣಗಳು ನಡೆದಿದ್ದು ಪುರಸಭೆಗೆ ಕಟ್ಟಬೇಕಾದ ಕಂತಿನ

ಹಣ ಕಟ್ಟಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಈ ರೀತಿಯ ಕಾನೂನಾ ಬಾಹಿರ ಕಾಂಟ್ರಾಕ್ಟ್‌ದಾರರನ್ನು ವಜಾ ಮಾಡಿ ಪುರಸಭೆಯಿಂದಲೇ ನೇರ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ಹೇಳಿಕೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಈ ಕಂಟ್ರಾಕ್ಟ್‌ದಾರರು ಕರಾರಿನಂತೆ ವಸೂಲು ಮಾಡದೆ ಹೆಚ್ಚಿಗೆ ವಸೂಲು ಮಾಡುತ್ತಾ ಇದ್ದರು ಎಂಬ ಬಗ್ಗೆ ಆಪಾದನೆಗಳು ಬಂದಿರುವುದು ನಿಜ ಎಂದು ಕಾಣಿಸುತ್ತದೆ. ಮತ್ತು ಆಪನು ಗುತ್ತಿಗೆ ಪ್ರಕಾರ ಕೊಡಬೇಕಾದ ಹಣ ಮುನಿಸಿಪಾಲಿಟಿಗೆ ಕೊಡಲಿಲ್ಲ ಎಂಬ ಬಗ್ಗೆ ಕೂಡ ಸಾಕಷ್ಟು ಆಧಾರ ಇದೆ ಎಂದು ಕಾಣಿಸುತ್ತದೆ. ಈತನ ಗುತ್ತಿಗೆ ರದ್ದು ಮಾಡಬೇಕೆಂದು ಮುನಿಸಿಪಾಲಿಟಿ ಅಧ್ಯಕ್ಷರು ಅಂದುಕೊಂಡಿದ್ದರು. ಆದರೆ ಮುನಿಸಿಪಲ್ ಕೌನ್ಸಿಲ್ ನವರು, ಇನ್ನೂ ಸ್ವಲ್ಪ ದಿನ ಅವಕಾಶ ಮಾಡಿಕೊಡಿ, ೨೯-೮-೮೬ರವರೆಗೆ ಟೈಂ ಕೊಡಿ, ಅಷ್ಟರಲ್ಲಿ ಬಾಕಿ ಇರತಕ್ಕ ಹಣ ಕೊಡಲಿ ಎಂದು ಹೇಳಿದರು. ಮತ್ತು ಹೆಚ್ಚು ಹಣ ವಸೂಲು ಮಾಡಬಾರದು ಎಂಬ ನಿಯಮಕ್ಕೆ ಒಪ್ಪಿಕೊಂಡರೆ ಟೈಂ ಕೊಡಿ ಎಂದು ಮುನಿಸಿಪಲ್ ಕೌನ್ಸಿಲ್‌ರವರು ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅವನು ಆ ರೀತಿ ಬರೆದುಕೊಟ್ಟಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಬರೆದುಕೊಟ್ಟಿದ್ದಾರೆ ಎಂದು ವರದಿ ಬಂದಿದೆ. ಬೆಳಗಿನ ಜಾವ ೩ ಗಂಟೆಗೆ ಟೆಲಿಫೋನ್ ಮೂಲಕ ನಾನು ತಿಳಿದುಕೊಂಡಿದ್ದೇನೆ. ನನಗೆ ಬಂದಿರುವ ವರದಿ ಪ್ರಕಾರ ಬರೆದುಕೊಟ್ಟಿದ್ದಾರೆ. ಆದ್ದರಿಂದ ಸೂಕ್ತ ಕ್ರಮ ಕಾನೂನು ಪ್ರಕಾರ ತೆಗೆದುಕೊಳ್ಳುತ್ತೇನೆ.

(೩). ರಾಜ್ಯದಲ್ಲಿ ಮಕ್ಕಳುಗಳು ಕಾಣೆಯಾಗುತ್ತಿರುವ ಬಗ್ಗೆ

ಶ್ರೀ ಡಿ.ಎ. ಚಿನ್ನಪ್ಪ.—ಪ್ರತಿ ದಿನ ರೇಡಿಯೋನಲ್ಲಿ ಕಾಣೆಯಾದವರ ಬಗ್ಗೆ ಪ್ರಕಟಣೆಯನ್ನು ಕೇಳುತ್ತಿದ್ದೇವೆ. ಮತ್ತು ಅಂತಹ ಕಾಣೆಯಾದ ಮಕ್ಕಳನ್ನು ಕಂಡಕೂಡಲೇ ಈ ಕೆಳಗಿನ ವಿಳಾಸಕ್ಕೆ ತಿಳಿಸಬೇಕೆಂದು ರೇಡಿಯೋ ಪ್ರಕಟಣೆ ತಿಳಿಸುತ್ತದೆ. ಹೀಗೆ ಸಾವಿರಾರು ಮಕ್ಕಳು ಅಪಹರಣವಾಗುತ್ತಿರುವ ಅಥವಾ ಕಾಣೆಯಾಗುತ್ತಿರುವುದನ್ನು ಪತ್ತೆ ಹಚ್ಚುವ ಬಗ್ಗೆ ಸರಕಾರ ಹೆಚ್ಚಿನ ಆಸಕ್ತಿ ವಹಿಸುತ್ತಿಲ್ಲದಿರುವುದು ಕಂಡುಬರುತ್ತದೆ. ಸರಕಾರ ಇದುವರೆಗೆ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿದೆ ಎಂಬುದನ್ನು ರೇಡಿಯೋ ತಿಳಿಸುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಪೋಷಕರು ಮಕ್ಕಳನ್ನು ಹೊರಗೆ ಕಳುಹಿಸಲು ಭಯಪಡುತ್ತಿದ್ದಾರೆ. ಹೊರಗೆ ಹೋದ ಮಕ್ಕಳು ಆ ದಿನ ಮನೆಗೆ ಬರುವ ತನಕ ಅವರು ಕಳವಳದಿಂದ ಕಾಯಬೇಕಾಗುತ್ತದೆ. ಈ ರೀತಿ ದಿನನಿತ್ಯ ಆಗುತ್ತಿರುವ ಅಪಹರಣ ಅಥವಾ ಕಾಣೆಯಾದ ಮಕ್ಕಳ ಬಗ್ಗೆ ಸರಕಾರ ವಿವರವಾದ ವಿವರಣೆಯನ್ನು ಸದನಕ್ಕೆ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ. ರೇಡಿಯೋದಲ್ಲಿ ಕಾಣೆಯಾದಂಥ ಮಕ್ಕಳ ಬಗ್ಗೆ ಪ್ರತಿದಿನ ಹೇಳುತ್ತಾರೆ, ನಿಜ. ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರನ್ನು ಹುಡುಕುವುದಕ್ಕೋಸ್ಕರ ಹಾಗೆ ಹೇಳುತ್ತಾರೆ. ಆದ್ದರಿಂದ ಇದು ಜಾಸ್ತಿಯಾಗಿಬಿಟ್ಟಿದೆ ಎಂದು ಏನೂ ಅರ್ಥವಾಗುವುದಿಲ್ಲ. ಮಾನ್ಯ ಸದಸ್ಯರಿಗೆ ಯಾವರೀತಿ ಇದರಲ್ಲಿ ಇನ್‌ಫರೆನ್ಸ್ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೋ ಗೊತ್ತಾಗಿಲ್ಲ. ಪೋಲೀಸರು ಈ ಬಗ್ಗೆ ಸರ್ವ ಪ್ರಯತ್ನಗಳನ್ನು ಮಾಡುತ್ತಾರೆ. ಅವರ ಜೊತೆಗೆ ರೇಡಿಯೋದಲ್ಲಿ ಪ್ರಕಟಣೆ ಮಾಡುತ್ತಾರೆ. ಸೂಕ್ತವಾದ ಎಲ್ಲಾ ಕ್ರಮವನ್ನೂ ತೆಗೆದುಕೊಳ್ಳುತ್ತೇವೆಂದು ಸನ್ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

(೪). ಕಾಪು ಪೋಲೀಸ್ ಠಾಣೆಯನ್ನು ಪೂರ್ಣ ಪ್ರಮಾಣದ ಠಾಣೆಯನ್ನಾಗಿ ಪರಿವರ್ತಿಸುವುದು

ಶ್ರೀ ವಸಂತ ವಿ. ಸಾಲಿಯಾನ.—ಕಾಪು ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಹಲವಾರು ಮುಖ್ಯ ದೇವಸ್ಥಾನಗಳು, ಕರಾವಳಿ ಗ್ರಾಮಗಳು, ಮಸೀದಿಗಳು, ಚರ್ಚುಗಳು ಒಳಗೊಂಡಿರುತ್ತವೆ. ದೇವಾಲಯಗಳಲ್ಲಿ ಲಕ್ಷಾಂತರ ರೂಪಾಯಿಗಳ ಬಂಗಾರದ ಒಡವೆಗಳು ಹಾಗೂ ಕಾಣಿಕೆ ಡಬ್ಬಿಗಳು (ಹುಂಡಿ) ಇರುತ್ತವೆ. ಇವುಗಳನ್ನು ರಕ್ಷಣೆ ಮಾಡಲು ಈ ಪೋಲೀಸ್ ಹೊರ ಠಾಣೆಯಲ್ಲಿ ರಾತ್ರಿ ಸಮಯದಲ್ಲಿ ಒಬ್ಬನೇ ಒಬ್ಬ ಪೋಲೀಸ್ ಸಿಬ್ಬಂದಿ ಇರುವುದರಿಂದ ಇವೆಲ್ಲವನ್ನೂ ರಕ್ಷಣೆ ಮಾಡಲು